ದಿನಾಂಕಃ30-11-2021 ರಂದು ಸಾಕ್ಷಿದಾರರನ್ನು ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ -19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಎಪಿಪಿ ಅವರಿಂದಃ**

ಸದರಿ ಚಾಸಾ-10 ರವರು ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ ಆರೋಪಿತರು ತಮ್ಮ ತಾಯಿ ಸುಂದರಬಾಯಿ ರವರನ್ನು ದಿಃ 02-12-2009 ರಂದು ಅವರ ಕಾರ್ಯಾಲಯಕ್ಕೆ ಕರೆದುಕೊಂಡು ಬಂದು ಸಿ ಟಿ ಸರ್ವೇ ನಂ. 4087 ರಲ್ಲಿ ಅಳತೆ 76X92 ಚ.ಮೀಟರನಲ್ಲಿ ಮನೆ ತಮ್ಮ ಮಾಲ್ಕಿಯಲ್ಲಿದ್ದು ಅದನನ್ನು ಪಾಲಾಕ್ಷಪ್ಪ ಬಸಪ್ಪ ರವರಿಗೆ ಮಾರಾಟ ಮಾಡುತ್ತಿದ್ದು ಈ ಬಗ್ಗೆ ಖರೀದಿ ಪತ್ರವನ್ನು ಬರೆದುಕೊಡಿ ಎಂದು ಹೇಳಿದ್ದರಿಂದ ನಾನೇ ಆ ಪತ್ರವನ್ನು ಕಂಪ್ಯೂಟರನಲ್ಲಿ ಟೈಪ ಮಾಡಿಕೊಟ್ಟು ನಾನು ಅದಕ್ಕೆ ದಸ್ತೂರಾಗಿ ಸಹಿ ಮಾಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತಾರೆ. ಅದಲ್ಲದೇ ಆರೋಪಿತನು ಕೊಟ್ಟಿಯಾಗಿ ಡಿ.ಟಿ.ಡಿ ಪತ್ರವನ್ನು ಟೈಪ ಮಾಡಿಸಿಕೊಂಡು ಬ್ಯಾಂಕ್ ನ ಅಧಿಕಾರಿಗಳಂತೆ ಸಹಿ ಮಾಡಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾರೆ . ಈಗ ನೋಡುತ್ತಿರುವ ನಿಪಿ-34 ಖರೀದಿ ಪತ್ರದಲ್ಲಿರುವ ಸಹಿ ಮತ್ತು ಮೊಹರು ಬಿ ಪಿ. ಲಕ್ಮೇಶ್ವರ ಅಂತಾ ಸಹಿ ಮಾಡಿರುತ್ತಾರೆ ಎಂದು ಚಾಸಾ-11 ರವರಿಗೆ ತೋರಿಸಿದಾಗ ಅವರು ಒಪ್ಪಿಕೊಂಡಿರುತ್ತಾರೆ . ತನಿಖೆಯನ್ನು ಮುಂದುವರೆಸಿ ತಹಶೀಲ್ದಾರ ರಾಣೇಬೆನ್ನೂರು ರವರಿಂದ ದಿಃ 10-08-2012 ರಂದು ತಿಳುವಳಿಕೆ ಚೀಟಿ ,ಡಿ.ಟಿ.ಡಿ ಪತ್ರದ ಖುಲಾಸೆ ಪತ್ರದ ನಕಲು ಪ್ರತಿ ದಿಃ 30-06-2009 ರ U-Form no.(21), ದಿಃ 03-12-2009 ರ ತಿಳುವಳಿಕೆ ಚೀಟಿ , ಖರೀದಿ ಪತ್ರದ ನಕಲು ಪ್ರತಿ , ದಿಃ 05-12-2009 ರ U-Form no.(21) ರ ಪ್ರತಿ , CTS No.4087 ರ ಪಿ.ಆರ್ ಕಾರ್ಡನ ನಕಲು ಪ್ರತಿಗಳನ್ನು ಪಡೆದುಕೊಂಡು ಕಡತದಲ್ಲಿ

ಅಳವಡಿಸಿಕೊಂಡಿರುತ್ತೇನೆ . ದಿಃ 14-08-2012 ರಂದು ಉಪನೊಂದಾಣಾಧಿಕಾರಿ , ರಾಣೇಬೆನ್ನೂರು ರವರು ಡಿ.ಟಿ.ಡಿ ಮೂಲ ಪ್ರತಿಯನ್ನು ಸಂಬಂಧಪಟ್ಟ ಪಕ್ಷಗಾರರಿಗೆ ಅದೇ ದಿನ ಕೊಟ್ಟಿರುತ್ತೇವೆ ಎಂದು ಮೂಲ ಹಾಜರಾತಿ ವಿನಾಯಿತಿ ಕೋರಿ ಪತ್ರ ಸಲ್ಲಿಸಿರುತ್ತಾರೆ . ಈಗ ನೋಡುತ್ತಿರುವ ಪತ್ರ ಸದರಿ ಪತ್ರವಾಗಿರುತ್ತದೆ .

**(ಮುಂದುವರೆದ ಮುಖ್ಯವಿಚಾರಣೆಗಾಗಿ ಎಪಿಪಿ ಅವರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.

ಓ ಹೇ ಕೇ ಸರಿ ಇದೆ.